ಕರ್ನಾಟಕ ಸರ್ಕಾರ

ಸಂಖ್ಯೆ: ಆಇ 447 ವೆಚ್ಚ-12/2022

ಕರ್ನಾಟಕ ಸರ್ಕಾರ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ:30.07.2022

**ಸುತ್ತೋಲೆ**

ವಿಷಯ: ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪರಿಷ್ಕೃತ ಸರಕು ಮತ್ತು ಸೇವಾ ತೆರಿಗೆಯನ್ನು ಅಳವಡಿಸಿಕೊಳ್ಳುವ ಕುರಿತು.

ಉಲ್ಲೇಖ: ಆರ್ಥಿಕ ಇಲಾಖೆಯ ಅಧಿಸೂಚನೆ ಸಂ:FD 20 CSL 2022, dt:15.07.2022

********

ಉಲ್ಲೇಖಿತ ಸರ್ಕಾರದ ಅಧಿಸೂಚನೆಯಲ್ಲಿ ನಿರ್ಮಾಣ ಕಾಮಗಾರಿಗಳ ಮೇಲೆ ವಿಧಿಸಲಾಗಿರುವ ಸರಕು ಮತ್ತು ಸೇವಾ ತೆರಿಗೆ (GST) ಯನ್ನು ದಿನಾಂಕ:18.07.2022ರಿಂದ ಜಾರಿಗೆ ಬರುವಂತೆ ಪರಿಷ್ಕರಣೆ ಮಾಡಲಾಗಿರುತ್ತದೆ. ಪ್ರಸ್ತಾಪಿತ ಹೆಚ್ಚುವರಿ GST ಪಾವತಿ ಕುರಿತಂತೆ ಸಂಗ್ರಹಣಾ ಪ್ರಾಧಿಕಾರಗಳು ಕೆಳಗಿನಂತೆ ಕ್ರಮವಹಿಸಲು ತಿಳಿಸಿದೆ.

1. **ಮುಂದುವರೆದ ಕಾಮಗಾರಿಗಳು :**

ಈಗಾಗಲೇ ಅನುಷ್ಠಾನಗೊಳಿಸಲಾಗುತ್ತಿರುವ ಮತ್ತು ಮುಂದುವರೆದ ಕಾಮಗಾರಿಗಳಿಗೆ ಸಂಬಂಧಿಸಿದಂತೆ, ದಿನಾಂಕ:18.07.2022 ರಂದು ಮತ್ತು ನಂತರದಲ್ಲಿ ಅನುಷ್ಠಾನವಾಗುವ ಕಾಮಗಾರಿ ಪ್ರಕರಣಕ್ಕೆ ಪರಿಷ್ಕೃತ ದರದಲ್ಲಿ GST ಯನ್ನು ಲೆಕ್ಕಹಾಕಿ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಪಾವತಿ ಮಾಡತಕ್ಕದ್ದು.

i. ಪರಿಷ್ಕೃತ ಸೇವಾ ತೆರಿಗೆ ಕ್ಲೇಮು ಕುರಿತು ಸಂಬಂಧಪಟ್ಟ ಗುತ್ತಿಗೆದಾರರು ಪ್ರಸ್ತಾಪಿತ ಪ್ರಮಾಣ (Quantity) ಗಳನ್ನು ದಿನಾಂಕ:18.07.2022 ರ ನಂತರ ಅನುಷ್ಠಾನವಾಗಿರುವ ಬಗ್ಗೆ ಮತ್ತು ಹೆಚ್ಚುವರಿ ತೆರಿಗೆ ಪಾವತಿ ಬಗ್ಗೆ Invoie ಗಳಲ್ಲಿ ದೃಢೀಕರಿಸತಕ್ಕದ್ದು.

ii. ಸಂಬಂಧಪಟ್ಟ ಪ್ರಾಧಿಕಾರಿಯು ಗುತ್ತಿಗೆದಾರರು ಸಲ್ಲಿಸಿರುವ invoice ನಲ್ಲಿನ ಕಾಮಗಾರಿಗಳು ಪ್ರಸ್ತಾಪಿತ ಅಧಿಸೂಚನೆ ನಂತರ ಅನುಷ್ಠಾನವಾಗಿರುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.

iii. ಪ್ರಸ್ತಾಪಿತ ತೆರಿಗೆ ಹೆಚ್ಚಳವು ಸರ್ಕಾರದ ಕಾರಣದಿಂದ ವಿಳಂಬವಾಗಿ ಮೂಲ ಗುತ್ತಿಗೆ ಅವಧಿ ಅಥವಾ ವಿಸ್ತೃತ ಗುತ್ತಿಗೆ ಅವಧಿ ವಿಸ್ತರಣೆಯಾಗಿದ್ದಲ್ಲಿ ಮಾತ್ರ ಅನ್ವಯವಾಗತಕ್ಕದ್ದು.

...2...

iv. ಒಂದು ವೇಳೆ GST ಪ್ರಾಧಿಕಾರದಿಂದ ಪಾವತಿಸಿದ ತೆರಿಗೆ ಮೊತ್ತವು ಹಿಂಪಾವತಿಯಾದಲ್ಲಿ ಸಂಬಂಧಪಟ್ಟ ಗುತ್ತಿಗೆದಾರರು ಅದನ್ನು ಸರ್ಕಾರಕ್ಕೆ ವರ್ಗಾಯಿಸುವುದಾಗಿ ಪ್ರಮಾಣೀಕರಿಸತಕ್ಕದ್ದು.

v. ಬಿಲ್ಲಿನಲ್ಲಿ ಹಾನಿ ಪರಿಹಾರ (Liquidated Damages) ಅಥವಾ ಇನ್ಯಾವುದೇ ಕಡಿತಗಳನ್ನು ಮಾಡಿದ್ದಲ್ಲಿ, invoice ನ ನಿವ್ವಳ ಮೊತ್ತಕ್ಕೆ ಮಾತ್ರ GST ಯನ್ನು ಪಾವತಿಸತಕ್ಕದ್ದು.

vi. ಈ ಮೇಲಿನಂತೆ GST ಪರಿಷ್ಕೃತ ದರದ ಹೆಚ್ಚಳದಿಂದ ಅನುಮೋದಿತ ಅಂದಾಜಿನಲ್ಲಿ ಹೆಚ್ಚಳ ಉಂಟಾದಲ್ಲಿ ಅಂತಹ ಪರಿಷ್ಕೃತ ಅಂದಾಜಿಗೆ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆಯಲು ಕ್ರಮವಹಿಸತಕ್ಕದ್ದು.

2. **ಹೊಸ ಕಾಮಗಾರಿಗಳು :**

i. ಇನ್ನು ಮುಂದೆ ತೆಗೆದುಕೊಳ್ಳಲಾಗುವ ಎಲ್ಲಾ ಹೊಸ ಕಾಮಗಾರಿಗಳ ಅಂದಾಜಿನಲ್ಲಿ (Estimate) ಪರಿಷ್ಕೃತ GST ದರವನ್ನು ಅಳವಡಿಸಿ ಅಂದಾಜು ತಯಾರಿಸಿ ಆಡಳಿತಾತ್ಮಕ ಅನುಮೋದನೆ ಪಡೆದು ಅನುಷ್ಠಾನಗೊಳಿಸತಕ್ಕದ್ದು.

ii. ಈಗಾಗಲೇ ಆಡಳಿತಾತ್ಮಕ ಅನುಮೋದನೆ ಪಡೆದು ಟೆಂಡರ್ ಪ್ರಕ್ರಿಯೆ ಹಂತದಲ್ಲಿ ಇರುವ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಪರಿಷ್ಕೃತ GST ದರದ ಹೆಚ್ಚುವರಿ ಮೊತ್ತವನ್ನು ಅಳವಡಿಸಿ ನಿಯಮಾನುಸಾರ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು ಕಾರ್ಯಾದೇಶ ನೀಡತಕ್ಕದ್ದು.

**(ಐ.ಎಸ್.ಎನ್.ಪ್ರಸಾದ್)**
ಸರ್ಕಾರದ ಅಪರ ಮುಖ್ಯಕಾರ್ಯದರ್ಶಿ
ಆರ್ಥಿಕ ಇಲಾಖೆ

ಇವರಿಗೆ:
ಸರ್ಕಾರದ ಎಲ್ಲಾ ಸಂಗ್ರಹಣಾ ಪ್ರಾಧಿಕಾರಗಳು.